KAHS200012922022

Presented on : 06-10-2022
Registered on : 06-10-2022
Decided on : 19-04-2023
Duration : 0 years, 6 months, 13 days

# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಆಲೂರು, ಹಾಸನ.

ದಿನಾಂಕಃ **19** ನೇ ಏಪ್ರಿಲ್ ಮಾಹೆಯ **2023** ರಂದು

ಉಪಸ್ಥಿತರುಃ

ಶ್ರೀಮತಿ ನಿರ್ಮಲ ಎಂ.ಸಿ, ಬಿ.ಕಾಂ.ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಆಲೂರು, ಹಾಸನ.

**Crl.Misc./201/2022**

ಅರ್ಜಿದಾರರು ಃ

1) ಜಯಮ್ಮ ಕೋಂ ಲೇಟ್ ತಿಮ್ಮಾಚಾರಿ,
ಸುಮಾರು 67 ವರ್ಷ ವಯಸ್ಸು,
ವಾಸಃ ಸಿದ್ದಾಪುರ ಗ್ರಾಮ, ಕುಂದೂರು ಹೋಬಳಿ,
ಆಲೂರು ತಾಲ್ಲೂಕು.

2) ವೆಂಕಟಾಚಾರಿ ಬಿನ್ ತಿಮ್ಮಾಚಾರಿ,
ಸುಮಾರು 70 ವರ್ಷ ವಯಸ್ಸು,
ವಾಸಃ ಸಿದ್ದಾಪುರ ಗ್ರಾಮ, ಕುಂದೂರು ಹೋಬಳಿ,
ಆಲೂರು ತಾಲ್ಲೂಕು.

3) ಕೆಂಚಮ್ಮ ಕೋಂ ಹೊನ್ನಾಚಾರಿ,
ಸುಮಾರು 66 ವರ್ಷ ವಯಸ್ಸು,
ವಾಸಃ ಚಿಕ್ಕಅರಕಲಗೂಡು ಗ್ರಾಮ,
ಅರಕಲಗೂಡು ತಾಲ್ಲೂಕು.

4) ಕೃಷ್ಣಚಾರಿ ಬಿನ್ ಲೇಟ್ ಕಾಳಚಾರಿ,
ಸುಮಾರು 64 ವರ್ಷ ವಯಸ್ಸು,
ವಾಸಃಕ್ಯಾತನಹಳ್ಳಿ ಗ್ರಾಮ,
ಕುಂದೂರು ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

**(ಪರಃ ಶ್ರೀ ಬಿ.ಆರ್.ಎಂ., ವಕೀಲರು)**

- ವಿರುದ್ಧ -

ಎದುರುದಾರರು ತಹಸೀಲ್ದಾರರು
ಃ ಜನನ ಮತ್ತು ಮರಣ ನೊಂದಣಾಧಿಕಾರಿಗಳು,
ತಾಲ್ಲೂಕು ಕಛೇರಿ, ಆಲೂರು ತಾಲ್ಲೂಕು,
ಹಾಸನ ಜಿಲ್ಲೆ.

**(ಏಕಪಕ್ಷೀಯ)**

## ಆ_ದೇ_ಶ

ಅರ್ಜಿದಾರರು ಅರ್ಜಿಯನ್ನು ಜನನ-ಮರಣ ಅಧಿನಿಯಮ 1969 ಕಲಂ 13(3)ರಡಿಯಲ್ಲಿ ದಾಖಲಿಸಿ 1 ನೇ ಅರ್ಜಿದಾರರ ಅತ್ತೆ ಮತ್ತು 2 ರಿಂದ 4 ನೇ ಅರ್ಜಿದಾರರ ತಾಯಿಯಾದ ಸುಬ್ಬಮ್ಮ ಕೋಂ ಕಾಳಚಾರಿ ಇವರು ದಿಃ21.10.1977 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರ ಮನೆಯವರು ಅವಿದ್ಯಾವಂತರಾಗಿದ್ದು ಸದರಿಯವರ ಮರಣ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ತಿಳಿಸಿ ನೊಂದಾವಣಿ ಮಾಡಿಸಿರುವುದಿಲ್ಲ. ಅರ್ಜಿದಾರರು ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಹಾಗೂ ಇತರೆ ಸೌಲಭ್ಯಗಳಿಗಾಗಿ ಸದರಿಯವರ ಮರಣ ದೃಢೀಕರಣ ಪತ್ರವು ಅವಶ್ಯಕವಾಗಿರುತ್ತದೆ ಅರ್ಜಿದಾರರು ಸದರಿಯವರ ಮರಣ ದೃಢೀಕರಣ ಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರ ಕಛೇರಿಯಲ್ಲಿ ಸದರಿಯವರ ಮರಣಕ್ಕೆ ಸಂಬಂಧಿಸಿದ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಸದರಿ ಸುಬ್ಬಮ್ಮ ಕೋಂ ಕಾಳಚಾರಿ ಇವರು ದಿಃ21.10.1977 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಜನನ ಮತ್ತು ಮರಣ ನೊಂದಾವಣಿಯನ್ನು ಪರಿಶೀಲಿಸಿ ಸದರಿ ಜನನ-ಮರಣ ನೊಂದಣಿ ವಹಿಯಲ್ಲಿ ನೊಂದಣಿಯಾಗಿಲ್ಲ ಎಂದು ತಿಳಿಸಿ ದಿನಾಂಕಃ11.05.2022 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಆದುದರಿಂದ, ಎದುರುದಾರರು ಜನನ ಮತ್ತು ಮರಣ ನೋಂದಣಿ ವಹಿಯಲ್ಲಿ ನೋಂದಣಿ ಮಾಡಿಕೊಂಡು ಮೃತರ ಮರಣ ದೃಢೀಕರಣ ಪತ್ರವನ್ನು ಅರ್ಜಿದಾರರಿಗೆ ನೀಡುವಂತೆ

ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ನಂತರ ಅರ್ಜಿದಾರರ ಪರ ವಕೀಲರು ಹಾಸನ ಮಾಧ್ಯಮ ದಿನ ಪತ್ರಿಕೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಪ್ರಕಟಣೆಯನ್ನು ನೀಡಿದರೂ ಸಹಾ ಯಾವುದೇ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುವುದಿಲ್ಲ.

3. ತದನಂತರ ಅರ್ಜಿದಾರರು ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ 1 ನೇ ಅರ್ಜಿದಾರರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿ ಅಲಭ್ಯ ಪ್ರಮಾಣ ಪತ್ರವನ್ನು ನಿಪಿ1 ರಂತೆ, ವಂಶವೃಕ್ಷವನ್ನು ನಿಪಿ.2 ರಂತೆ, ಪತ್ರಿಕಾ ಪ್ರಕಟಣೆಯನ್ನು ನಿಪಿ.3 ರಂತೆ, ನೋಟರೀಕೃತ ಆಧಾರ್ ಕಾರ್ಡನ್ನು ನಿಪಿ.4 ರಂತೆ ಹಾಜರುಪಡಿಸಿ ಗುರುತಿಸಿಕೊಂಡು ತಮ್ಮ ಪರ ಸಾಕ್ಷ್ಯವನ್ನು ಅಂತ್ಯಗೊಳಿಸಿಕೊಂಡಿರುತ್ತಾರೆ. ಆದ್ದರಿಂದ ಅರ್ಜಿದಾರರ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

4. ವಾದವನ್ನು ಆಲಿಸಲಾಯಿತು.

5. ಅರ್ಜಿಯಲ್ಲಿ ಹೇಳಿದ ವಿಚಾರಗಳನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಗಣಿಸಿದಾಗ ಈ ಕೆಳಕಂಡ ಅಂಶಗಳು ಪರಿಗಣನೆಗೆ ಬರುತ್ತದೆಃ

1. ಅರ್ಜಿದಾರರು ಈ ಅರ್ಜಿಯಲ್ಲಿ ಕೇಳಿದಂತೆ ನಿರ್ದೇಶನಾತ್ಮಕ ಆದೇಶವನ್ನು ನೀಡಲು ಸೂಕ್ತವಾದಂತಹ ಸಕಾರಣಗಳನ್ನು ರುಜುವಾತುಗೊಳಿಸಿರುತ್ತಾರೆಯೇ?

2. ಯಾವ ಆದೇಶ?

6. ಈ ಮೇಲಿನ ಅಂಶಗಳಿಗೆ ಈ ಮುಂದೆ ಹೇಳಿದ ಕಾರಣಗಳನ್ನು ನೀಡಿ ಈ ಕೆಳಗಿನಂತೆ ಉತ್ತರಿಸಲಾಯಿತು.

ಒಂದನೇ ಪರಿಗಣನಾಂಶಃ ಸಕಾರಾತ್ಮಕವಾಗಿ

ಎರಡನೇ ಪರಿಗಣನಾಂಶಃ ಅಂತಿಮ ಆದೇಶದಂತೆಃ

<u>ಕಾ ರ ಣ ಗ ಳು</u>

7. **<u>ಒಂದನೇ_ಪರಿಗಣನಾಂಶಃ</u>** ಅರ್ಜಿದಾರರು ಈ ಮೊದಲೇ ಹೇಳಿದಂತೆ ಪ್ರಸ್ತುತ ಅರ್ಜಿಯನ್ನು ಎದುರುದಾರರಿಗೆ 1 ನೇ ಅರ್ಜಿದಾರರ ಅತ್ತೆಯಾದ ಸುಬ್ಬಮ್ಮ ಕೋಂ ಕಾಳಚಾರಿ ಇವರ ಮರಣದ ದಿನಾಂಕವನ್ನು ಸಂಬಂಧಪಟ್ಟ ಮರಣ ನೊಂದಣಿ ವಹಿಯಲ್ಲಿ ನಮೂದಿಸುವಂತೆ ಕೋರಿರುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಿದಂತಹ ವಿಚಾರಗಳನ್ನು ಪುರಾವೆಗೊಳಿಸುವ ನಿಟ್ಟಿನಲ್ಲಿ 1 ನೇ ಅರ್ಜಿದಾರರು ನ್ಯಾಯಾಲಯದ ಮುಂದೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಮುಖೇನ ಸಾಕ್ಷ್ಯ ನುಡಿದಿರುತ್ತಾರೆ ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ತನ್ನ ಅತ್ತೆಯಾದ ಸುಬ್ಬಮ್ಮ ಕೋಂ ಕಾಳಚಾರಿ ಇವರು ದಿಃ21.10.1977 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರ ಮನೆಯವರು ಅವಿದ್ಯಾವಂತರಾಗಿದ್ದು ಸದರಿಯವರ ಮರಣ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ತಿಳಿಸಿ ನೊಂದಾವಣಿ ಮಾಡಿಸಿರುವುದಿಲ್ಲ, ಅರ್ಜಿದಾರರು ಜಮೀನಿನ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ಹಾಗೂ ಇತರೆ ಸೌಲಭ್ಯಗಳಿಗಾಗಿ ಸದರಿಯವರ ಮರಣ ದೃಢೀಕರಣ ಪತ್ರವು ಅವಶ್ಯಕವಾಗಿರುತ್ತದೆ. ಅರ್ಜಿದಾರರು ಸದರಿಯವರ ಮರಣ ದೃಢೀಕರಣ ಪತ್ರವನ್ನು ಪಡೆಯುವ ಸಲುವಾಗಿ ಎದುರುದಾರರ ಕಛೇರಿಯಲ್ಲಿ ಸದರಿಯವರ ಮರಣಕ್ಕೆ ಸಂಬಂಧಿಸಿದ ಮರಣ ದೃಢೀಕರಣ ಪತ್ರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎದುರುದಾರರು ಸದರಿ ಸುಬ್ಬಮ್ಮ ಕೋಂ ಕಾಳಚಾರಿ ಇವರು ದಿಃ21.10.1977 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ಮರಣ ಹೊಂದಿರುವ ಬಗ್ಗೆ ಜನನ-ಮರಣ ನೊಂದಣಿ ವಹಿಯಲ್ಲಿ ನೊಂದಣಿಯಾಗಿಲ್ಲ ಎಂದು ತಿಳಿಸಿ ದಿನಾಂಕಃ11.05.2022 ರಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೆ ಅವರ ಸಾಕ್ಷ್ಯಕ್ಕೆ ಪೂರಕವಾಗಿ ಎದುರುದಾರರು ನೀಡಿದ ಹಿಂಬರಹ ಹಾಗೂ ಪತ್ರಿಕಾ ಪ್ರಕಟಣೆಯನ್ನೂ ಸಹಾ ಈ ನ್ಯಾಯಾಲಯದ ಸಮ್ಮುಖ

ಹಾಜರುಪಡಿಸಿರುತ್ತಾರೆ. ನಿಪಿ.1 ನ್ನು ಪರಿಗಣಿಸಿದಾಗ ಅರ್ಜಿದಾರರ ಅತ್ತೆಯಾದ ಸುಬ್ಬಮ್ಮ ಕೋಂ ಕಾಳಚಾರಿ ಇವರ ಮರಣದ ದಿನಾಂಕವು ನೊಂದಣಿಯಾಗದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅರ್ಜಿದಾರರು ಇದರ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ನೀಡಿದರೂ ಸಹ ಯಾವುದೇ ವ್ಯಕ್ತಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ಅರ್ಜಿದಾರರ ಸಾಕ್ಷ್ಯವನ್ನು ಅಲ್ಲಗಳೆಯುವ ಯಾವುದೇ ಸಂಗತಿಗಳು ನ್ಯಾಯಾಲಯದ ಮುಂದೆ ಇಲ್ಲದಿರುವ ಕಾರಣ ಅರ್ಜಿದಾರರ ಸಾಕ್ಷ್ಯವನ್ನು ನಂಬದಿರಲು ಯಾವುದೇ ಸಕಾರಣಗಳು ಕಂಡುಬರುವುದಿಲ್ಲ, ಆದ್ದರಿಂದ ನ್ಯಾಯಾಲಯವು ಅರ್ಜಿದಾರರು ಹಾಜರುಪಡಿಸಿರುವ ಲಿಖಿತ ಹಾಗೂ ಮೌಖಿಕ ಸಾಕ್ಷ್ಯವನ್ನು ಪರಿಗಣಿಸಿ, ಅರ್ಜಿದಾರರು ತಾವು ತಮ್ಮ ಅರ್ಜಿಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರಿರುವುದಾಗಿ ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ ಮತ್ತು ಸದರಿ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.

8. <u>ಎರಡನೇ ಪರಿಗಣನಾಂಶಃ</u> ಈ ಮೊದಲು ಒಂದನೇ ಪರಿಗಣನಾಂಶದಲ್ಲಿ ವಿವರಿಸಿದ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸಿ, ಎರಡನೇ ಪರಿಗಣನಾಂಶವನ್ನು ಉತ್ತರಿಸಲಾಯಿತು.

ಃ <u>ಆ ದೇ ಶ</u> ಃ

ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿದೆ.

ಸುಬ್ಬಮ್ಮ ಕೋಂ ಕಾಳಚಾರಿ ಇವರು ದಿಃ21.10.1977 ರಂದು ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಸಿದ್ದಾಪುರ ಗ್ರಾಮದಲ್ಲಿ ಮರಣ ಹೊಂದಿರುವುದಾಗಿ ಎದುರುದಾರರು ಸಂಬಂಧಿಸಿದ ನೊಂದಣಿ ವಹಿಯಲ್ಲಿ ಸದರಿಯವರ ಮರಣ ದಿನಾಂಕವನ್ನು ನಮೂದಿಸುವುದು ಮತ್ತು ಅದಕ್ಕೆ ತಗಲುವ ಶುಲ್ಕವನ್ನು ಅರ್ಜಿದಾರರಿಂದ ಭರಿಸಿಕೊಳ್ಳತಕ್ಕದ್ದು.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ್ದನ್ನು ಓದಿ, ಪರಿಶೀಲಿಸಿ ತಿದ್ದುಪಡಿ ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 19 ನೇ ಏಪ್ರಿಲ್ ಮಾಹೆಯ 2023 ರಂದು ಉಚ್ಚರಿಸಲಾಯಿತು)

**(ಶ್ರೀಮತಿ ನಿರ್ಮಲ ಎಂ.ಸಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಆಲೂರು.

<u>ಃ ಅನುಸೂಚಿ ಃ</u>

<u>ಅರ್ಜಿದಾರರ ಪರ ವಿಚಾರಣೆ ಮಾಡಿದ ಸಾಕ್ಷಿದಾರರುಃ</u>

ಪಿಡಬ್ಲ್ಯೂ 1 ಃ ಜಯಮ್ಮ

<u>ಅರ್ಜಿದಾರರ ಪರ ಗುರುತಿಸಿಕೊಂಡ ದಾಖಲೆಗಳುಃ</u>

ನಿಶಾನೆ ಪಿ 1 ಃ ಅಲಭ್ಯ ಪ್ರಮಾಣ ಪತ್ರ
ನಿಶಾನೆ ಪಿ 2 ಃ ವಂಶವೃಕ್ಷ
ನಿಶಾನೆ ಪಿ 3 ಃ ಪತ್ರಿಕಾ ಪ್ರಕಟಣೆ
ನಿಶಾನೆ ಪಿ 4 ಃ ನೋಟರೀಕೃತ ಆಧಾರ್ ಕಾರ್ಡ್

<u>ಎದುರುದಾರರ ಪರ ವಿಚಾರಣೆಯಾದ ಸಾಕ್ಷಿಗಳು ಮತ್ತು ದಾಖಲೆಗಳುಃ</u>-

– ಇಲ್ಲ -

ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಆಲೂರು.